ಸ್ಥಾಪನೆ : 1976

# ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

Financially Sound and Well Managed Bank as per RBI Parameters Dated 01-12-2022


**ನೋಂದಾಯಿತ ಮತ್ತು ಆಡಳಿತ ಕಛೇರಿ :**

ನಂ. 195/33, ಶ್ರೀ ಸುಧಾ ರಜತ ಭವನ, ಆರ್.ವಿ. ರಸ್ತೆ, ಜಯನಗರ, ಬೆಂಗಳೂರು-560 004.

ದೂರವಾಣಿ : 26565651, 26560195, 8867701055 ಫ್ಯಾಕ್ಸ್ : 26567189

Email : generalmanager@srisudhabank.com Website : www.srisudhabank.com


## 46ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ತಿಳುವಳಿಕೆ

ಮಾನ್ಯ ಸದಸ್ಯರೇ,

ಬ್ಯಾಂಕಿನ **46ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು** ದಿನಾಂಕ 17-09-2023ನೇ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸರಿಯಾಗಿ **ಬ್ಯಾಂಕಿನ ಅಧ್ಯಕ್ಷರಾದ ಡಾ|| ಎಂ. ತಿಮ್ಮೇಗೌಡರವರ** ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯೊಂದಿಗೆ "ಸಿಂಧೂರ ಕನ್‌ವೆನ್‌ಷನ್ ಸೆಂಟರ್", ನಂ. 48/75, 15ನೇ ಅಡ್ಡ ರಸ್ತೆ, ಸಾರಕ್ಕಿ, 1ನೇ ಫೇಸ್, ಜೆ.ಪಿ.ನಗರ, ರಿಂಗ್ ರೋಡ್, ಗಂಗಾಧರನಗರ, (ಜೆ.ಪಿ.ನಗರ ಮೆಟ್ರೊ ಸ್ಟೇಷನ್ ಹತ್ತಿರ), ಬೆಂಗಳೂರು – 560078 ರಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರು ತಪ್ಪದೆ ಭಾಗವಹಿಸಲು ಕೋರಿದೆ.

### ಸಭೆಯ ಕಾರ್ಯಸೂಚಿಗಳು :

1. ಪ್ರಾರ್ಥನೆ.
2. ಸ್ವಾಗತ – ಬ್ಯಾಂಕಿನ ಅಧ್ಯಕ್ಷರಿಂದ.
3. 46ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರವನ್ನು ಓದಿ ದಾಖಲು ಮಾಡುವುದು.
4. ದೈವಾಧೀನರಾದ ಸದಸ್ಯರುಗಳ ಗೌರವಾರ್ಥವಾಗಿ ಸಂತಾಪ ಸೂಚನೆ.
5. ದಿನಾಂಕ 18.09.2022ರಂದು ನಡೆದ ಬ್ಯಾಂಕಿನ 45ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.
6. ಬ್ಯಾಂಕಿನ 2022-2023ನೇ ವರ್ಷದ ಆಡಳಿತ ಮಂಡಳಿಯ ವರದಿ ಮತ್ತು 2023-24ನೇ ವರ್ಷದ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಅನುಮೋದಿಸುವುದು.
7. ಬ್ಯಾಂಕಿನ 2022-2023ನೇ ವರ್ಷದ ಆಡಿಟ್ಟಾದ ಲೆಕ್ಕಗಳು ಮತ್ತು ವರದಿಗೆ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದಿಸುವುದು.
8. 2022-2023ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
9. 2022-2023ನೇ ವರ್ಷದಲ್ಲಿ ಮಂಜೂರಾದ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಖರ್ಚಾಗಿರುವುದನ್ನು ಅನುಮೋದಿಸುವುದು ಮತ್ತು 2023-2024ನೇ ವರ್ಷಕ್ಕೆ ಅಂದಾಜು ಆದಾಯ ಮತ್ತು ವೆಚ್ಚವನ್ನು ಅನುಮೋದಿಸುವುದು.
10. ಗರಿಷ್ಠ ಷೇರು ಮಿತಿಯನ್ನು ರೂ. 25 ಕೋಟಿಯಿಂದ ರೂ. 30 ಕೋಟಿಗೆ ನಿಗದಿಪಡಿಸುವುದು.
11. 2023-24ನೇ ಸಾಲಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಅನುಮೋದನೆಗೆ ಕಳುಹಿಸಿದ ಶಾಸನಬದ್ಧ ಲೆಕ್ಕ ಪರಿಶೋಧಕರ ಪ್ರಸ್ತಾವನೆಗೆ ಅನುಮೋದನೆ.
12. ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮ ತಿದ್ದುಪಡಿ / ಹೊಸ ಸೇರ್ಪಡೆ ಹಾಗೂ ವೃಂದಬಲ ಪರಿಷ್ಕರಣೆ.
13. ಸದಸ್ಯರ ಮಕ್ಕಳಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಗರಿಷ್ಠ ಅಂಕ ಪಡೆದ ತಲಾ 25 ಮಕ್ಕಳಿಗೆ ಪ್ರತಿಭಾ ಪುರಸ್ಕಾರ.
14. ಸದಸ್ಯರಿಂದ ಸ್ವೀಕೃತವಾದ ಸಲಹೆ/ಸೂಚನೆಗಳ ಪರಿಶೀಲನೆ.
15. ಅಧ್ಯಕ್ಷರ ಅನುಮತಿಯೊಂದಿಗೆ ಇತರೆ ವಿಷಯಗಳು.

ಬೆಂಗಳೂರು

ದಿನಾಂಕ : 24-07-2023

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ

**ಕೋಕಿಲ ಎನ್.ಎಸ್.**

ಪ್ರಧಾನ ವ್ಯವಸ್ಥಾಪಕರು

<u>ವಿಶೇಷ ಸೂಚನೆ :-</u> 1) ಬ್ಯಾಂಕಿನ ಗುರುತಿನ ಚೀಟಿ ಇಲ್ಲದೆ ಸಭೆಗೆ ಪ್ರವೇಶವಿಲ್ಲ ಹಾಗೂ 12.00 ಗಂಟೆ ನಂತರ ಹಾಜರಾತಿಗೆ ಅವಕಾಶವಿಲ್ಲ.

2) ಸದಸ್ಯೇತರರ ಪ್ರವೇಶಕ್ಕೆ ಅವಕಾಶವಿಲ್ಲ.

3) ಸದಸ್ಯರಿಗಾಗಿ ಲಘು ಉಪಹಾರ ವ್ಯವಸ್ಥೆ ಏರ್ಪಡಿಸಲಾಗಿದೆ.

# 46ನೇ ಸರ್ವ ಸದಸ್ಯರ ಸಭೆಯ ಕಾರ್ಯಸೂಚಿಗೆ ಟಿಪ್ಪಣಿ

| ಕಾರ್ಯಸೂಚಿಯಲ್ಲಿರುವ ಕ್ರ.ಸಂ. | ಟಿಪ್ಪಣಿ |
|---|---|
| 3. | 46 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆಯು ಈಗಾಗಲೇ ತಮ್ಮ ಕೈ ಸೇರಿದೆ. |
| 4. | ದೈವಾಧೀನರಾದ ಸದಸ್ಯರುಗಳ ಹೆಸರನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಪ್ರಕಟಿಸಲಾಗಿದೆ. |
| 5. | ದಿನಾಂಕ : 18-09-2022ರಂದು ನಡೆದ 45ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. |
| 6. | 2022-23ನೇ ಸಾಲಿನ ಆಡಳಿತ ಮಂಡಳಿ ವರದಿ ಹಾಗೂ 2023-24ನೇ ಸಾಲಿನ ಕ್ರಿಯಾ ಯೋಜನೆಯನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. |
| 7. | 2022-2023ನೇ ಸಾಲಿನ ಪರಿಶೋಧಿತ ಲೆಕ್ಕ ಪರಿಶೋಧನಾ ವರದಿಗೆ ಸಮಜಾಯಿಷಿಯನ್ನು ವಾರ್ಷಿಕ ವರದಿಯ ಪುಸ್ತಕದಲ್ಲಿ ಮುದ್ರಿಸಲಾಗಿದೆ ಹಾಗೂ ಬ್ಯಾಂಕ್ ವೆಬ್ ಸೈಟ್ **www.srisudhabank.com** ರಲ್ಲಿ ಪ್ರಕಟಿಸಲಾಗಿದೆ. |
| 8. | 2022-2023ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ. |
| 9. | 2022-2023ನೇ ಸಾಲಿಗೆ ಮಂಜೂರಾದ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಖರ್ಚಾಗಿರುವುದನ್ನು ಕಾರಣ ಸಹಿತವಾಗಿ ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. ಹಾಗೂ 2023-2024ನೇ ಸಾಲಿಗೆ ಅಂದಾಜು ಆಯ ವ್ಯಯವನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಿದೆ. |
| 10. | ಷೇರು ಗರಿಷ್ಠ ಮಿತಿಯು 2023-24ನೇ ಸಾಲಿನಲ್ಲಿ ರೂ.25 ಕೋಟಿ ಮೀರುವ ಸಾಧ್ಯತೆಯಿದ್ದು, ಹಂತಹಂತವಾಗಿ ರೂ.30 ಕೋಟಿಗೆ ಗುರಿ ಹೊಂದಲಾಗುವುದು. |
| 11. | ಮೆ॥ ಜಿ.ಆರ್.ಎಸ್.ಎಂ ಆಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯನ್ನು 2023-24ನೇ ಸಾಲಿಗೆ ನಿಯೋಜಿಸಲು **RBI** ಅನುಮೋದನೆಗೆ ಕಳುಹಿಸಿರುವುದನ್ನು ಸರ್ವಸದಸ್ಯರ ಸಭೆಯ ಸ್ಥಿರೀಕರಣಕ್ಕಿಡಲಾಗಿದೆ. |
| 12. | ಸಿಬ್ಬಂದಿ ಸೇವಾ ನಿಯಮಗಳ ತಿದ್ದುಪಡಿ / ಹೊಸ ಸೇರ್ಪಡೆ ಹಾಗೂ ಸಿಬ್ಬಂದಿ ವೃಂದಬಲ ಪರಿಷ್ಕರಣೆ ಬಗ್ಗೆ ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. |
| 13. | ಪ್ರತಿ ಸಾಲಿನಂತೆ ಈ ಸಾಲಿನಲ್ಲಿಯೂ, ಬ್ಯಾಂಕಿನಲ್ಲಿ ಸ್ವೀಕೃತವಾದ ಅರ್ಜಿಗಳಲ್ಲಿ ಗರಿಷ್ಠ ಅಂಕವನ್ನಾಧರಿಸಿ ಎಸ್.ಎಸ್.ಎಲ್.ಸಿ ಯ 25 ವಿದ್ಯಾರ್ಥಿಗಳಿಗೆ ತಲಾ ರೂ.7,500/- ರಂತೆ ಹಾಗೂ ಪಿ.ಯು.ಸಿ ಯ 25 ವಿದ್ಯಾರ್ಥಿಗಳಿಗೆ ತಲಾ ರೂ.10,000/- ರಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. |
| 14 | ಸದಸ್ಯರಿಂದ ನಿಗದಿತ ಸಮಯದೊಳಗೆ ಸಲಹೆ/ಸೂಚನೆಗಳೇನಾದರೂ ಬಂದಿದ್ದಲ್ಲಿ ವಿಮರ್ಶೆ. |

## ವಿಶೇಷ ಸೂಚನೆ

1. ಎಲ್ಲಾ ಸದಸ್ಯರು ತಮ್ಮ ಷೇರು ಖಾತೆಗೆ ಸಂಬಂಧಿಸಿದಂತೆ ಇತ್ತೀಚಿನ **KYC** ದಾಖಲೆಗಳನ್ನು ಸಲ್ಲಿಸಿ ಷೇರು ಖಾತೆಗಳನ್ನು **update** ಮಾಡಿಕೊಳ್ಳತಕ್ಕದ್ದು.
2. ವಾರ್ಷಿಕ ವರದಿಯ ಪುಸ್ತಕವನ್ನು ದಿನಾಂಕ:02/09/2023ರಿಂದ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಕೇಂದ್ರ ಕಛೇರಿ ಹಾಗೂ ಶಾಖೆಗಳಲ್ಲಿ ಸದಸ್ಯರು ಖುದ್ದಾಗಿ ಪಡೆಯಬಹುದು. ಹಾಗೂ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸತಕ್ಕ ಅಥವಾ ಸಲಹೆ ಸೂಚನೆಗಳೇನಾದರೂ ಇದ್ದಲ್ಲಿ ದಿನಾಂಕ 06/09/2023ರೊಳಗೆ ಲಿಖಿತವಾಗಿ ತಲುಪಿಸಬೇಕು. ನಂತರ ಬಂದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.
3. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕರಣ 17(1)(ಡಿ) ಕ್ಕೆ ಸಂಬಂಧಿಸಿದಂತೆ ದಿನಾಂಕ 07.10.2021 ರಿಂದ ಜಾರಿಗೆ ಬಂದ ತಿದ್ದುಪಡಿ ಅನ್ವಯ, ಒಂದಕ್ಕಿಂತ ಹೆಚ್ಚು ಸಹಕಾರ ಬ್ಯಾಂಕ್‌ಗಳಲ್ಲಿ ಸದಸ್ಯತ್ವ ಹೊಂದಿದವರೇನಾದರೂ ಇದ್ದಲ್ಲಿ ಅಂತಹವರು 90ದಿನಗಳೊಳಗಾಗಿ ಒಂದು ಬ್ಯಾಂಕಿನಲ್ಲಿ ಮಾತ್ರ ಸದಸ್ಯತ್ವವನ್ನು ಉಳಿಸಿಕೊಂಡು ಉಳಿದೆಲ್ಲ ಸದಸ್ಯತ್ವವನ್ನು ರದ್ದುಪಡಿಸಿಕೊಳ್ಳದಿದ್ದಲ್ಲಿ ಅಂತಹವರು ಹೊಸದಾಗಿ ಯಾವ ಸಹಕಾರ ಬ್ಯಾಂಕಿನಲ್ಲಿ ಸದಸ್ಯತ್ವವನ್ನು ಪಡೆದಿರುವರೋ ಅವರ ಸದಸ್ಯತ್ವವು ನಿಂತು ಹೋಗುವುದೆಂದು ಭಾವಿಸತಕ್ಕದ್ದು.
4. ಬ್ಯಾಂಕಿನ ಎ.ಟಿ.ಎಂ ಯಂತ್ರವನ್ನು ಜಯನಗರ ಶಾಖೆಯಲ್ಲಿ ಸ್ಥಾಪಿಸಲಾಗಿದೆ. ಯಾವುದೇ ಬ್ಯಾಂಕಿನ ಎ.ಟಿ.ಎಂ ಕಾರ್ಡ್‌ನ್ನು ಉಪಯೋಗಿಸಬಹುದಾಗಿದೆ.
5. ಸದಸ್ಯರೆಲ್ಲರೂ ನಮ್ಮ ಬ್ಯಾಂಕಿನ "ಡೆಬಿಟ್ ಕಾರ್ಡ್" ಪಡೆದು, ವ್ಯವಹರಿಸಲು ಕೋರಲಾಗಿದೆ. ನಮ್ಮ ಬ್ಯಾಂಕ್ ಅಥವಾ ಹೆಚ್.ಡಿ.ಎಫ್.ಸಿ ಬ್ಯಾಂಕ್ ಎ.ಟಿ.ಎಂ. ಬಳಸಿದಲ್ಲಿ, "ವ್ಯವಹಾರ ಶುಲ್ಕ ರಿಯಾಯಿತಿ" ಇದೆ.
6. ಪ್ರತಿಯೊಬ್ಬ ಸದಸ್ಯರು ಖಾತೆದಾರರು ತಮ್ಮ ಷೇರು / ಠೇವಣಿ , ಉಳಿತಾಯ / ಚಾಲ್ತಿ ಖಾತೆಗಳಿಗೆ ತಮ್ಮ ವಾರಸುದಾರರನ್ನು ನೇಮಿಸಿರತಕ್ಕದ್ದು.
7. ಮೃತ ದಿನಾಂಕದಿಂದ ಷೇರು ಬಂಡವಾಳಕ್ಕೆ ಡಿವಿಡೆಂಡ್ ನೀಡಲು ಅವಕಾಶವಿಲ್ಲದಿರುವುದರಿಂದ ಹಾಗೇನಾದರೂ ಪಾವತಿಯಾದಲ್ಲಿ ಮರಣೋತ್ತರ ಪರಿಹಾರ ನಿಧಿಯಲ್ಲಿ ಕಟಾಯಿಸಲಾಗುವುದು.

## ಮಹತ್ವ ಪೂರ್ಣ ಸೂಚನೆ :

1) ತಿದ್ದುಪಡಿಯಾದ ಸಹಕಾರ ಕಾಯ್ದೆಯನ್ವಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಯಲ್ಲಿ ಹಾಜರಾಗಬೇಕಾಗಿರುವುದು ಅಗತ್ಯವಾಗಿರುವುದರಿಂದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ.
2) 2019-2020ನೇ ವರ್ಷಕ್ಕೆ ಸದಸ್ಯರಿಗೆ ಮಂಜೂರಾದ ಷೇರು ಡಿವಿಡೆಂಡ್‌ನ್ನು ದಿನಾಂಕ 31-12-2023 ರೊಳಗಾಗಿ ಪಡೆಯಬೇಕು ತಪ್ಪಿದಲ್ಲಿ ಆಪದ್ಧನಕ್ಕೆ ವರ್ಗಾಯಿಸಲಾಗುವುದು. ಇದೇ ಆಖೈರು ನೋಟೀಸೆಂದು ಭಾವಿಸತಕ್ಕದ್ದು.
3) ಸುಸ್ತಿದಾರನಾದ ಸದಸ್ಯರು ಬಾಕಿ ಸಂದಾಯ ಮಾಡುವವರೆಗೂ ಹಕ್ಕುಗಳನ್ನು ಚಲಾಯಿಸತಕ್ಕದ್ದಲ್ಲ.
4) ಉಪವಿಧಿ 19(3) ರಂತೆ ಬ್ಯಾಂಕಿನ ಸದಸ್ಯನು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 2 ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ 5 ರಲ್ಲಿ ಎರಡು ಸಹಕಾರ ವರ್ಷಗಳಲ್ಲಿ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಯನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥ ಸದಸ್ಯರು ಒಂದು ವರ್ಷ ಅವಧಿಗೆ ಸಾಮಾನ್ಯ ಸಭೆಯಲ್ಲಿ ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಹಕ್ಕನ್ನು ಕಳೆದುಕೊಳ್ಳುತ್ತಾರೆ.

**ಕನಿಷ್ಠ ಸೇವೆಗಳು** : (ಎಲ್ಲಾ ಅಥವಾ ಯಾವುದೇ ಒಂದು ಸೇವೆ)

(1) ಸದಸ್ಯರು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳ ರೂ.1000/-ಗಳು.
(2) ಸದಸ್ಯರು ಹೊಂದಿರತಕ್ಕ ಕನಿಷ್ಠ ಠೇವಣಿಯು ಎರಡು ಸಾವಿರದ ಐದು ನೂರು.
(3) ಸದಸ್ಯರು ತನ್ನ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆಗಳಲ್ಲಿ ವರ್ಷದಲ್ಲಿ ಕನಿಷ್ಠ ಮೂರು ವ್ಯವಹಾರಗಳನ್ನು ಮಾಡಿರತಕ್ಕದ್ದು.

## ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ

2023ನೇ ಏಪ್ರಿಲ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮರಲ್ಲಿ ಪ್ರಥಮರಾಗಿ ಉತ್ತೀರ್ಣರಾದ ಸದಸ್ಯರ 25 ಮಕ್ಕಳಿಗೆ ತಲಾ ರೂ.7,500-00 ಗಳ ಹಾಗೂ ಪಿಯುಸಿ ಎರಡನೇ ವರ್ಷದಲ್ಲಿ ಉತ್ತೀರ್ಣರಾದ ಸದಸ್ಯರ 25 ಮಕ್ಕಳಿಗೆ ತಲಾ ರೂ.10,000-00 ಪ್ರೋತ್ಸಾಹ ಧನವನ್ನು ನೀಡಲು ಉದ್ದೇಶಿಸಿದೆ.

ಮೇಲ್ಕಂಡ ಪ್ರೋತ್ಸಾಹಧನದ ಪ್ರಯೋಜನ ಪಡೆಯಲು ಮಕ್ಕಳ ತಂದೆ ತಾಯಿಯವರು ಸದಸ್ಯತ್ವದ ಗುರುತಿನ ಚೀಟಿ, ಮಕ್ಕಳ ಅಂಕಪಟ್ಟಿ, ಮುಂದಿನ ತರಗತಿಗೆ ದಾಖಲಾದ ಪ್ರಮಾಣ ಪತ್ರ ಮತ್ತು ಭಾವ ಚಿತ್ರಗಳೊಂದಿಗೆ ದಿನಾಂಕ: 08/09/2023ರಂದು ಸಂಜೆ 5-30ರೊಳಗಾಗಿ ಆಡಳಿತ ಕಛೇರಿಗೆ ಅರ್ಜಿ ಸಲ್ಲಿಸಲು ಕೋರಿದೆ.

# ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆರ್.ವಿ. ರಸ್ತೆ, ಜಯನಗರ, ಬೆಂಗಳೂರು-560 004.

## ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮಕ್ಕೆ ತಿದ್ದುಪಡಿ

| ಕ್ರಸಂ. | ಸಿಬ್ಬಂದಿ ಸೇವಾ ನಿಯಮ ಸಂಖ್ಯೆ | ಹಾಲಿ ಜಾರಿಯಲ್ಲಿರುವ ನಿಯಮ | ಪರಿಷ್ಕೃತ / ಹೊಸ ಸೇರ್ಪಡೆ | ತಿದ್ದುಪಡಿ / ಸೇರ್ಪಡೆಗೆ ಕಾರಣ |
|---|---|---|---|---|
| 1 | 12.5.1.1 | ಇಲ್ಲ | JAIIB ಹಾಗೂ CAIIB ತೇರ್ಗಡೆ ಹೊಂದುವ ಸಿಬ್ಬಂದಿಗಳಿಗೆ ಅವರ ಪ್ರಮಾಣ ಪತ್ರದ ದಿನಾಂಕದಿಂದ ಜಾರಿಗೊಳ್ಳುವಂತೆ ತಲಾ ಒಂದರಂತೆ 2 ವೇತನ ಬಡ್ತಿಗಳನ್ನು ನೀಡಲಾಗುತ್ತದೆ. ಪರಂತು, ಈ ವೇತನ ಬಡ್ತಿಗಳು ಮೇಲ್ದರ್ಜೆಯ ಹುದ್ದೆಗೆ ಬಡ್ತಿಹೊಂದಿದಾಗ ವಿಲೀನಗೊಳ್ಳುತ್ತವೆ. | ಪದೋನ್ನತಿಗೆ ಈಗಾಗಲೇ ಅವಕಾಶ ಕಲ್ಪಿಸಿದ್ದರೂ ಸಹಾ ಸಿಬ್ಬಂದಿಗಳನ್ನು ಉತ್ತೇಜಿಸುವ ಸಲುವಾಗಿ ರಾಷ್ಟ್ರೀಕೃತ ಹಾಗೂ ವಾಣಿಜ್ಯ ಬ್ಯಾಂಕಿನಲ್ಲಿರುವಂತೆ ಈ ವೇತನ ಬಡ್ತಿಯನ್ನು ನೀಡಲಾಗುವುದು. |
| 2 | 12.12 | <u>ಕುಟುಂಬ ಯೋಜನಾ ಪ್ರೋತ್ಸಾಹ</u><br>ಬ್ಯಾಂಕಿನ ಪ್ರತಿಯೊಬ್ಬ ನೌಕರ / ಳು ಅಥವಾ ನೌಕರನ ಪತ್ನಿ / ನೌಕರಳ ಪತಿಯು ಎರಡು ಮಕ್ಕಳಿಗೆ ಸೀಮಿತಗೊಳಿಸಿ ಕುಟುಂಬ ಯೋಜನಾ ಶಸ್ತ್ರ ಕ್ರಿಯೆಗೊಳಗಾದಲ್ಲಿ ಒಂದು ವೈಯಕ್ತಿಕ ವೇತನ ಬಡ್ತಿಯನ್ನು ನೀಡಲಾಗುವುದು. ಪತಿ / ಪತ್ನಿಯು ಈ ಸೌಲಭ್ಯವನ್ನು ಬೇರೆ ಎಲ್ಲೂ ಪಡೆದಿಲ್ಲವೆನ್ನುವುದನ್ನು ಖಚಿತ ಪಡಿಸಿಕೊಂಡ ನಂತರವೇ ಈ ವೈಯಕ್ತಿಕ ವೇತನ ಬಡ್ತಿಯನ್ನು ನೀಡತಕ್ಕದ್ದು. | <u>ಕುಟುಂಬ ಯೋಜನಾ ಪ್ರೋತ್ಸಾಹ</u><br>ಬ್ಯಾಂಕಿನ ಪ್ರತಿಯೊಬ್ಬ ನೌಕರ / ನೌಕರಳು ಎರಡು ಮಕ್ಕಳಿಗೆ ಸೀಮಿತಗೊಳಿಸಿ ಕುಟುಂಬ ಯೋಜನಾ ಶಸ್ತ್ರ ಕ್ರಿಯೆಗೊಳಗಾದಲ್ಲಿ ಒಂದು ವೈಯಕ್ತಿಕ ವೇತನ ಬಡ್ತಿಯನ್ನು ನೀಡಲಾಗುವುದು. | ಬ್ಯಾಂಕಿನ ಸೌಲಭ್ಯವು ಕೇವಲ ನೌಕರರಿಗೆ ಮಾತ್ರ ಸೀಮಿತಗೊಳಿಸುವ ಉದ್ದೇಶದಿಂದ ತಿದ್ದುಪಡಿಯನ್ನು ತರಲಾಗಿದೆ. |

# ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆರ್.ವಿ. ರಸ್ತೆ, ಜಯನಗರ, ಬೆಂಗಳೂರು-560 004.

## ಬ್ಯಾಂಕಿನ ಸಿಬ್ಬಂದಿ ವೃಂದಬಲ ಹಾಗೂ ಪದೋನ್ನತಿ ಮೀಸಲಾತಿ ಪರಿಷ್ಕರಣೆ.

| ಕ್ರ.ಸಂ. | ಹುದ್ದೆ | ಹಾಲಿ ಮಂಜೂರಾಗಿರುವುದು | ಹೆಚ್ಚುವರಿಗೆ ಪ್ರಸ್ತಾವನೆ | ಹೆಚ್ಚುವರಿಯೂ ಸೇರಿ ಒಟ್ಟು ಹುದ್ದೆಗಳು | ಹೆಚ್ಚುವರಿ ಪ್ರಸ್ತಾವನೆಗೆ ಕಾರಣ |
|---|---|---|---|---|---|
| 1 | ವ್ಯವಸ್ಥಾಪಕರು | 12 | 2 | 14 | ಮುಂದಿನ ದಿನಗಳಲ್ಲಿ ಎರಡು ಹೊಸ ಶಾಖೆಗಳನ್ನು ಪ್ರಾರಂಭಿಸುವ ಯೋಜನೆ ಇರುವುದರಿಂದ ಹೆಚ್ಚುವರಿ ಹುದ್ದೆಗಳನ್ನು ಸೃಷ್ಠಿಸಲಾಗಿದೆ. |
| 2 | ಸಹಾಯಕ ವ್ಯವಸ್ಥಾಪಕರು | 12 | 2 | 14 | |
| 3 | ಹಿರಿಯ ಸಹಾಯಕರು | 12 | 2 | 14 | |
| 4 | ಕಿರಿಯ ಸಹಾಯಕರು ಗ್ರೇಡ್ II | 10 | 5 | 15 | |

| ಕ್ರ.ಸಂ. | ಹುದ್ದೆ | ಹಾಲಿ ಇರುವ ಶೇಕಡವಾರು ಪದೋನ್ನತಿ | ಪ್ರಸ್ತಾವಿತ ಪರಿಷ್ಕೃತ ಶೇಕಡವಾರು ಪದೋನ್ನತಿ | ಪರಿಷ್ಕರಣೆಗೆ ಕಾರಣ |
|---|---|---|---|---|
| 1 | ಸಹಾಯಕ ವ್ಯವಸ್ಥಾಪಕರ ಹುದ್ದೆಗೆ ಪದೋನ್ನತಿ | 100% ಹಿರಿಯ ಸಹಾಯಕರ ಹುದ್ದೆಯಿಂದ | 2/3 ರಷ್ಟು ಹಿರಿಯ ಸಹಾಯಕರ ಹುದ್ದೆಗಳಿಂದ<br>1/3 ರಷ್ಟು ಕಿರಿಯ ಸಹಾಯಕರು ಗ್ರೇಡ್ II ಅಥವಾ ಮೇಲ್ದರ್ಜೆಯ ಹುದ್ದೆಗಳಲ್ಲಿ ಕನಿಷ್ಠ 7 ವರ್ಷ ಸೇವೆ ಸಲ್ಲಿಸಿದ ಸಿಬ್ಬಂದಿಗಳು CAIIB ಅನ್ನು ಪಾಸ್ ಮಾಡಿದಲ್ಲಿ ನೇರ ಪದೋನ್ನತಿ | ಬ್ಯಾಂಕಿಂಗ್ ಬಗ್ಗೆ ಹೆಚ್ಚಿನ ಪರಿಜ್ಞಾನ ಹೊಂದುವ CAIIB ಪಾಸ್ ಮಾಡುವ ಅಭ್ಯರ್ಥಿಗಳಿಗೆ ಸೂಕ್ತ ಅವಕಾಶವನ್ನು ಕಲ್ಪಿಸುವ ಸಲುವಾಗಿ ಹಾಗೂ ಇತರೆ ಸಿಬ್ಬಂದಿಗಳಿಗೆ ಉತ್ತೇಜನ ನೀಡುವ ಸಲುವಾಗಿ ಮೀಸಲಾತಿಯನ್ನು ನೀಡಲಾಗಿದೆ. |
| 2 | ಕಿರಿಯ ಸಹಾಯಕರು ಗ್ರೇಡ್ II | 90% ನೇರ ನೇಮಕಾತಿ<br>10% ಕಛೇರಿ ಸಹಾಯಕರ ಹುದ್ದೆಗಳಿಂದ | 2/3 ರಷ್ಟು ನೇರ ನೇಮಕಾತಿ<br>1/3 ರಷ್ಟು ಕಛೇರಿ ಸಹಾಯಕರಾಗಿ ಕನಿಷ್ಠ 5 ವರ್ಷ ಸೇವಾನುಭವ ಹೊಂದಿದ್ದು, ಪದವಿಧರರು ಹಾಗೂ ಡಿಪ್ಲೊಮ ಇನ್ ಅರ್‌ಬನ್ ಕೋ-ಆಪರೇಟಿವ್ ಬ್ಯಾಂಕ್ ಪಾಸ್ ಮಾಡಿದ ಅರ್ಹ ಕಛೇರಿ ಸಹಾಯಕರು | ಹಾಲಿ ಸೇವೆಯಲ್ಲಿದ್ದು ಬ್ಯಾಂಕಿಂಗ್ ಬಗ್ಗೆ ಜ್ಞಾನಾರ್ಜನೆ ಹೊಂದಿರುವ ಕಛೇರಿ ಸಹಾಯಕರಿಗೆ ಇನ್ನು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ಅವರ ಪ್ರತಿಭೆಯನ್ನು ಬ್ಯಾಂಕಿನ ಪ್ರಗತಿಗೆ ಬಳಸಿಕೊಳ್ಳುವ ಬಗ್ಗೆ. |

## ಬ್ಯಾಂಕಿನ ಪ್ರಗತಿ ಪಕ್ಷಿನೋಟ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 2019 | 2020 | 2021 | 2022 | 2023 |
|---|---|---|---|---|---|---|
| 1 | ಶಾಖೆಗಳು | 10 | 10 | 10 | 10 | 10 |
| 2 | ಸದಸ್ಯರ ಸಂಖ್ಯೆ | 14781 | 15328 | 15248 | 15248 | 15413 |
| 3 | ಪಾವತಿಯಾದ ಷೇರು ಮೊಬಲಗು | 1908.07 | 2015.11 | 2131.84 | 2223.14 | 2350.48 |
| 4 | ಆಪದ್ಧನ ಮತ್ತು ಇತರೆ ನಿಧಿಗಳು | 2547.60 | 3004.15 | 3646.90 | 4064.09 | 4306.34 |
| 5 | ಠೇವಣಿಗಳು | 31746.04 | 30793.31 | 29567.36 | 32619.17 | 35508.02 |
| 6 | ಸಾಲ ಮತ್ತು ಮುಂಗಡ | 18418.62 | 18479.00 | 20047.28 | 19116.78 | 20551.41 |
| 7 | ಅನುತ್ಪಾದಕ ಆಸ್ತಿಗಳ ಸ್ಥೂಲ ಪ್ರಮಾಣ (Gross NPA) | 1.99% | 2.56% | 11.17% | 2.93% | 3.11% |
| | ಅನುತ್ಪಾದಕ ಆಸ್ತಿಗಳ ನಿವ್ವಳ ಪ್ರಮಾಣ (Net NPA) | 0.69% | 0.92% | 8.94% | 0 | 0 |
| 8 | ಬಂಡವಾಳ ಪರ್ಯಾಪ್ತತಾ ಅನುಪಾತ (CRAR) | 21.46% | 23.46% | 21.65% | 28.03% | 25.16% |
| 9 | ನಿವ್ವಳ ಲಾಭ (ಲಕ್ಷಗಳಲ್ಲಿ) | 373.01 | 381.55 | 205.00 | 393.82 | 382.91 |
| 10 | ಘೋಷಿಸಿದ ಷೇರು ನಫೆ | 13% | ಆರ್.ಬಿ.ಐ. ರದ್ದುಪಡಿಸಿದೆ | 6% | ಶೇ. 10% | ಶೇ. 10% ಶಿಫಾರಸ್ಸು ಮಾಡಿದೆ |

ಅಂಚೆ ನೋಂದಣಿ ಪಡೆದಿದೆ

ತೆರೆದ-ಅಂಚೆ

**ಮುದ್ರಿತ ವಿಷಯ**

ಶ್ರೀಮತಿ/ಶ್ರೀ........................................................................................

........................................................................................

........................................................................................

........................................................................................

ಅಂಚೆ ತಲುಪದಿದ್ದಲ್ಲಿ ಹಿಂತಿರುಗಿಸಿ :

**ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,**
ನಂ. 195/33, "ಶ್ರೀ ಸುಧಾ ರಜತ ಭವನ", ಆರ್.ವಿ. ರಸ್ತೆ
ಜಯನಗರ, ಬೆಂಗಳೂರು-560 004.